| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 536/2024**

ಪಿಡ್ಲ್ಯೂಃ 6 ಸಿಡ್ಲ್ಯೂಃ 6

ಸಾಕ್ಷಿದಾರನ ಹೆಸರು : ಭುಜಂಗ ಹೆಗ್ಡೆ
ತಂದೆಯ ಹೆಸರು : ಮಹಾಬಲ ಹೆಗ್ಡೆ
ಪ್ರಾಯ : 62 ವರ್ಷ
ಉದ್ಯೋಗ : ಕೃಷಿ
ವಾಸ : ಮಾಳ

ದಿನಾಂಕ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಇದಕ್ಕೂ ಮುಂಚೆ ನೋಡಿರುವುದಿಲ್ಲ.

ಚಾಸಾ-1 ರಿಂದ 4, 8 ರಿಂದ 11 ರವರ ಪರಿಚಯ ಇಲ್ಲ. ಚಾಸಾ-5 ಮತ್ತು 7 ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು.

ಒಂದುವರೆ ವರ್ಷದ ಹಿಂದೆ ನಾನು ನನ್ನ ಜಮೀನಿನಲ್ಲಿ ಕೆಲಸ ಮಾಡಿಕೊಂಡಿದ್ದೆ. ಅ ಸಮಯದಲ್ಲಿ ನನಗೆ ನನ್ನ ಸಂಬಂಧದವರು ಮಾಳಗ್ರಾಮದ ಕೂಡಬೆಟ್ಟು ಎಂಬಲ್ಲಿ ಅಪಘಾತ ಆಗಿದೆ ಎಂದು ನನಗೆ ತಿಳಿಸಿದಂತೆ ನಾನು ಅದನ್ನು ನೋಡಲು ಹೋಗಿದ್ದೆ. ಸದ್ರಿ ಅಪಘಾತ ಹೇಗೆ ಆಗಿದೆ ಎಂದು ಗೊತ್ತಿಲ್ಲ. ಯಾರಿಗೆಲ್ಲ ಪೆಟ್ಟಾಗಿದೆ ಎಂದು ಗೊತ್ತಿಲ್ಲ. ಯಾವ ವಾಹನದ ಮಧ್ಯೆ ಅಪಘಾತ ಆಗಿದೆ ಎಂದು ಗೊತ್ತಿಲ್ಲ. ಪೊಲೀಸರು ನನ್ನನ್ನು ಘಟನೆ ಬಗ್ಗೆ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಅಪಘಾತವಾದ ಬಸ್ಸಿನ ಭಾವಚಿತ್ರವನ್ನು ನೋಡಿ ನನಗೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

2. ದಿಃ20.12.2023 ರಂದು ಸಂಜೆ ನನ್ನಸಂಬಂಧಿಕಾರಾದ ಪ್ರಭಾಕರ್ ಹೆಗ್ಡೆಯವರ ಮನೆಯ ಮುಂದೆ ನಿಂತಾಗ ಸುಮಾರು 5.15 ಗಂಟೆಗೆ ನಾನು ಅಲ್ಲಿ ನಿಂತಿದ್ದಾಗ ಶೃಂಗೇರಿ ಬಜಗೋಳಿ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ಮಾಳ ಕಡೆಯಿಂದ ಬಜಗೋಳಿ ಕಡೆಗೆ ಆರೋಪಿ ಕೆಎಸ್ ಆರ್ ಟಿ ಸಿ ಬಸ್ಸನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ರಸ್ತೆಯ ತೀರಾ ಬಲಭಾಗಕ್ಕೆ ಚಲಾಯಿಸಿಕೊಂಡು ಹೋಗಿ ರಸ್ತೆ ಪಕ್ಕದ ಮರಕ್ಕೆ ಢಿಕ್ಕಿಹೊಡೆದನ್ನು ಎಂದರೆ ನಾನು ನೋಡಿರುವುದಿಲ್ಲ. ನಾನು ಹಾಗೂ ಅಕ್ಕಪಕ್ಕದಲ್ಲಿ ಸಂಚರಿಸುತ್ತಿದ್ದವರು ಸೇರಿ ಓಡಿ ಹೋಗಿ ನೋಡಿದ್ದು ಸದ್ರಿ ಬಸ್ಸು ಉತ್ತರ ಕನ್ನಡ ಜಿಲ್ಲೆಯ ಹಾರವಾಢ ಹೈಸ್ಕೂಲಿನ ಮಕ್ಕಳ ಪ್ರವಾಸಕ್ಕೆ ಹೋದ ಬಸ್ಸು ಆಗಿದ್ದು ಸದ್ರಿ ಬಸ್ಸಿನಲ್ಲಿ ಮಕ್ಕಳ ಪೈಕಿ 3 ಮಕ್ಕಳಿಗೆ ಸಣ್ಣಪುಟ್ಟ ಗಾಯವಾಗಿದ್ದು ಅವರನ್ನು ಬಸ್ಸಿನಲ್ಲಿದ್ದ ಶಿಕ್ಷಕರು ಕಾರ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಗೊತ್ತಿಲ್ಲ.

3.ಈ ಅಪಘಾತಕ್ಕೆ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಲಾನೆಯೇ ಕಾರಣ ಎಂದರೆ ಗೊತ್ತಿಲ್ಲ. ದಿಃ21.12.2023 ರಂದು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ